ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 15-04-1992

# *ಬ್ರಾಹ್ಮಣರ ಎರಡು ಚಿಹ್ನೆಗಳು- ನಿಶ್ಚಯ ಹಾಗೂ ವಿಜಯ.*

( ब्राह्मणों की दो निशानियाँ - निश्चय और विजय)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ನಿಶ್ಚಯ ಬುದ್ಧಿ ಶ್ರೇಷ್ಠಾತ್ಮರೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ನಾಲ್ಕಾರು ಕಡೆಯ ಬ್ರಾಹ್ಮಣ ಮಕ್ಕಳ ವಿಶೇಷ ಎರಡು ಲಕ್ಷಣಗಳನ್ನು ನೋಡುತ್ತಿದ್ದೆವು. ಬ್ರಾಹ್ಮಣರು ಅರ್ಥಾತ್ ನಿಶ್ಚಯಬುದ್ಧಿ ಮತ್ತು ನಿಶ್ಚಯಬುದ್ಧಿ ಅರ್ಥಾತ್ ವಿಜಯೀ. ಅಂದಾಗ ಪ್ರತಿಯೊಬ್ಬ ಬ್ರಾಹ್ಮಣರು ಎಲ್ಲಿಯವರೆಗೆ ನಿಶ್ಚಯಬುದ್ಧಿಯವರಾಗಿದ್ದೀರಿ ಮತ್ತು ಎಷ್ಟು ವಿಜಯಿಯಾಗಿದ್ದೀರಿ? ಏಕೆಂದರೆ ಬ್ರಾಹ್ಮಣ ಜೀವನದ ತಳಹದಿಯೇ ನಿಶ್ಚಯವಾಗಿದೆ ಮತ್ತು ನಿಶ್ಚಯದ ಪ್ರಮಾಣವಾಗಿದೆ- ವಿಜಯ ಅಂದಾಗ ನಿಶ್ಚಯ ಮತ್ತು ವಿಜಯ ಎರಡರ ಪರ್ಸೆಂಟೇಜ್ ಒಂದೇ ಆಗಿದೆಯೋ ಅಥವಾ ಅಂತರವಿದೆಯೋ? ಫಲಿತಾಂಶದಲ್ಲಿ ಏನನ್ನು ನೋಡಿರಬಹುದು? ನಿಶ್ಚಯದ ಪರ್ಸೆಂಟೇಜನ್ನು ಎಲ್ಲರೂ ಹೆಚ್ಚಿಗೆ ಅನುಭವ ಮಾಡುತ್ತಾರೆ ಮತ್ತು ವಿಜಯದ ಪರ್ಸೆಂಟೇಜ್ ನಿಶ್ಚಯಕ್ಕಿಂತಲೂ ಕಡಿಮೆ ಅನುಭವ ಮಾಡುತ್ತಾರೆ. ಎಷ್ಟು ನಿಶ್ಚಯವಿದೆ ಎಂದು ಯಾರೊಂದಿಗಾದರೂ ಕೇಳಿದರೆ ಎಲ್ಲರೂ 100% ಇದೆಯೆಂದು ಹೇಳುತ್ತಾರೆ ಮತ್ತು ನಿಶ್ಚಯದ ಚಿಹ್ನೆ ವಿಜಯವು ಎಷ್ಟಿದೆ ಎಂದು ಕೇಳಿದಾಗ ಅದರಲ್ಲಿ 100% ಎಂದು ಹೇಳುತ್ತೀರಾ? ತಮ್ಮ ಸ್ಲೋಗನ್ ಆಗಿದೆ- ನಿಶ್ಚಯಬುದ್ಧಿ ವಿಜಯಂತಿ ಅಂದಮೇಲೆ ಮತ್ತೆ ನಿಶ್ಚಯ ಮತ್ತು ವಿಜಯದಲ್ಲಿ ಅಂತರವೇಕೆ? ನಿಶ್ಚಯ ಮತ್ತು ವಿಜಯ ಎರಡೂ ಲಕ್ಷಣಗಳು ಸಮಾನವಾಗಿರಬೇಕಲ್ಲವೆ ಆದರೆ ಅಂತರವೇಕೆ ಆಗುತ್ತದೆ? ಇದಕ್ಕೆ ಕಾರಣವೇನು? ಯಾವುದೇ ಬುನಾದಿ(ತಳಪಾಯ)ಯನ್ನು ಯಾವಾಗ ಪಕ್ಕಾ ಮಾಡುವರೋ ಆಗ ಆ ಸ್ಥಾನವನ್ನು ನಾಲ್ಕೂಕಡೆ ಗಮನ ನೀಡಿ ಬಲಪಡಿಸಲಾಗುತ್ತದೆ. ಒಂದುವೇಳೆ ನಾಲ್ಕೂ ಕಡೆಗಳಲ್ಲಿ ಯಾವುದಾದರೂ ಒಂದು ಮೂಲೆಯು ನಿರ್ಬಲವಾದರೂ ಸಹ ಅದು ಪಕ್ಕಾ ಆಗಿರುವುದೋ ಅಥವಾ ಅಲುಗಾಡುತ್ತಾ ಇರುವುದೋ? ಹಾಗೆಯೇ ನಿಶ್ಚಯದ ಬುನಾದಿಯು

ನಾಲ್ಕೂಕಡೆ ಅರ್ಥಾತ್ ವಿಶೇಷವಾಗಿ ನಾಲ್ಕು ಮಾತುಗಳ ಸಂಪೂರ್ಣ ನಿಶ್ಚಯವಿರಬೇಕು. ಆ ನಾಲ್ಕು ಮಾತುಗಳನ್ನು ಮೊದಲೂ ತಿಳಿಸಿದ್ದೇವೆ:.

ಒಂದನೆಯದಾಗಿ- ತಂದೆಯ ಮೇಲೆ ಸಂಪೂರ್ಣ ನಿಶ್ಚಯ. ಅವರು ಹೇಗಿದ್ದಾರೆಯೋ, ಯಾರಾಗಿದ್ದಾರೆಯೋ, ಯಾವ ಶ್ರೀಮತವನ್ನು ಹೇಗೆ ಕೊಟ್ಟಿದ್ದಾರೆಯೋ ಆದರಂತೆ ವಿಧಿಪೂರ್ವಕವಾಗಿ ಯಥಾರ್ಥವಾಗಿ ಅರಿತುಕೊಳ್ಳುವುದು, ಅಂಗೀಕರಿಸುವುದು ಮತ್ತು ಅದರಂತೆ ನಡೆಯುವುದು.

ಎರಡನೆಯ ವಿಷಯ- ತಮ್ಮ ಶ್ರೇಷ್ಠ ಸ್ವಮಾನ ಸಂಪನ್ನ ಶ್ರೇಷ್ಠಭಾಗ್ಯಶಾಲಿ ಆತ್ಮನ ಸ್ವರೂಪವನ್ನು ಅರಿತುಕೊಳ್ಳುವುದು. ಅಂಗೀಕರಿಸುವುದು ಮತ್ತು ಅದರಂತೆಯೇ ನಡೆಯುವುದು.

ಮೂರನೆಯ ವಿಷಯ- ನಿಮ್ಮ ಶ್ರೇಷ್ಠ ಬ್ರಾಹ್ಮಣ ಪರಿವಾರವನ್ನು ಯಥಾರ್ಥವಿಧಿಯಿಂದ ಹೇಗಿದ್ದಾರೆಯೋ ಹಾಗೆಯೇ ತಿಳಿದು. ಅಂಗೀಕರಿಸುವುದು ಮತ್ತು ಅದರಂತೆಯೇ ನಡೆಯುವುದು.

ನಾಲ್ಕನೇ ವಿಷಯ- ಇಡೀ ಕಲ್ಪದಲ್ಲಿ ಈ ಶ್ರೇಷ್ಠ ಪುರುಷೋತ್ತಮ ಯುಗ ಅಥವಾ ಸಮಯವನ್ನು ಅದೇ ಮಹತ್ವಿಕೆಯಿಂದ ತಿಳಿದುಕೊಂಡು ಅದನ್ನು ಅಂಗೀಕರಿಸಿ ನಡೆಯುವುದು. ಈ ನಾಲ್ಕು ವಿಷಯಗಳಲ್ಲಿ ಯಾರು ಸ್ಥಿರವಾದ ನಿಶ್ಚಯ ಬುದ್ಧಿಯವರಾಗಿದ್ದಾರೆಯೋ ಮತ್ತು ನಾಲ್ಕರಲ್ಲಿಯೂ ಸಂಪನ್ನ ಪರ್ಸೆಂಟೇಜ್ ಇದೆಯೋ ಅವರನ್ನೇ ಸಂಪೂರ್ಣ ಯಥಾರ್ಥ ನಿಶ್ಚಯಬುದ್ಧಿಯವರೆಂದು ಹೇಳಲಾಗುವುದು.

ಈ ನಾಲ್ಕು ನಿಶ್ಚವೆಂಬ ಬುನಾದಿಗೆ ಸ್ತಂಭಗಳಾಗಿದೆ. ಕೇವಲ ಒಬ್ಬ ತಂದೆಯಲ್ಲಿ ನಿಶ್ಚಯವಿದ್ದರೆ ಇನ್ನು ಮೂರು ವಿಷಯಗಳಲ್ಲಿ ಯಾವುದೇ ಸ್ತಂಭವು ನಿರ್ಬಲವಾಗಿದೆ, ಸದಾ ಬಲವಾಗಿಲ್ಲದೇ, ಕೆಲವೊಮ್ಮೆ ಅಚಲವಾಗಿದ್ದು, ಕೆಲವೊಮ್ಮೆ ಅಲುಗಾಡುತ್ತಾ ಇದೆ ಎಂದರೂ ಸಹ ಅದು ಸೋಲುಂಟು ಮಾಡಿಸುತ್ತದೆ. ವಿಜಯಿಗಳನ್ನಾಗಿ ಮಾಡುವುದಿಲ್ಲ. ಯಾವುದೇ ಏರುಪೇರು ನಿರ್ಬಲರನ್ನಾಗಿ ಮಾಡುತ್ತದೆಯೆಂದರೆ ನಿರ್ಬಲರು ಸದಾ ವಿಜಯಿಗಳಾಗಲು ಸಾಧ್ಯವಿಲ್ಲ ಆದ್ದರಿಂದ ನಿಶ್ಚಯ ಮತ್ತು ವಿಜಯದಲ್ಲಿ ಅಂತರವಾಗಿಬಿಡುತ್ತದೆ. ಬಾಪ್‌ದಾದಾರವರ ಮುಂದೆ ಬಹಳಮಕ್ಕಳು ಮುಗ್ಧರಾಗಿ ವಾರ್ತಾಲಾಪ ಮಾಡುತ್ತಾರೆ- ನಮಗೆ ನಿಶ್ಚಯವಂತೂ ಪೂರ್ಣವಾಗಿದೆ. ಬಾಬಾ ನಾನು ನಿಮ್ಮವನು ಮತ್ತು ತಾವು ನನ್ನವರಾಗಿದ್ದೀರಿ. ಇದು ಪಕ್ಕಾ ಇದೆ, 100% ಅಲ್ಲ, 500% ನಿಶ್ಚಯವಿದೆ.... ಆದರೆ ಏರುಪೇರೂ ಸಹ ಇದೆ ಮತ್ತು ಒಪ್ಪಿಸುವುದಕ್ಕಾಗಿಯೂ ಹೇಳುತ್ತಾರೆ- ತಾವಂತೂ ನಮ್ಮವರಾಗಿದ್ದೀರಲ್ಲವೆ ಎಂದು ಪಕ್ಕಾ ಮಾಡಿಸುತ್ತಾರೆ. ಬಹಳ ಮುಗ್ಧಮಾತುಗಳಲ್ಲಿ ಮಾತನಾಡುತ್ತಾರೆ- ನಾನು ಯಾರಾಗಿದ್ದೇನೆ, ಹೇಗಿದ್ದೇನೆ, ತಮ್ಮವನಾಗಿದ್ದೇನೆ ಎಂದು. ಮತ್ತು ತಂದೆಯೂ ಹೇಳುತ್ತಾರೆ- ತಾವು ಹೇಗಿದ್ದೀರೋ, ಯಾರಾಗಿದ್ದೀರೋ, ನೀವು ನನ್ನವರಾಗಿದ್ದೀರಿ ಆದರೆ ತಂದೆಯು ಹೇಗಿದ್ದಾರೆ. ಯಾರಾಗಿದ್ದಾರೆಯೋ ಹಾಗೆಯೇ ತಮ್ಮವರಾಗಿದ್ದಾರೆಯೇ? ಮುಗ್ಧರಾಗುವುದು ಒಳ್ಳೆಯದೇ ಆಗಿದೆ. ಹೃದಯದಿಂದ ಮುಗ್ಧರಾಗಿ ಆದರೆ ಮಾತುಗಳಲ್ಲಿ ಹಾಗೂ ಕರ್ಮದಲ್ಲಿ ಮುಗ್ಧರಾಗಬೇಡಿ. ಹೃದಯದಿಂದ ಭೋಲಾ ಮಕ್ಕಳು ಭೋಲಾನಾಥ ಪ್ರಿಯರಾಗಿದ್ದಾರೆ. ವಿಷಯಗಳಲ್ಲಿ ಭೊಲಾ ಆಗಿರುವವರು ಸ್ವಯಂ ಕೂಡಾ ಮೋಸ ಹೊಗುತ್ತಾರೆ ಮತ್ತು ಅನ್ಯರಿಗೂ ಮೋಸ ಮಾಡುತ್ತಾರೆ. ಮತ್ತು ಕರ್ಮದಿಂದ ಬೋಲಾ ಆಗಿರುವವರು ತನಗೂ ನಷ್ಟವನ್ನುಂಟು ಮಾಡಿಕೊಳ್ಳುತ್ತಾರೆ ಮತ್ತು ಸೇವೆಯಲ್ಲಿಯೂ ನಷ್ಟ ಮಾಡುತ್ತಾರೆ ಆದ್ದರಿಂದ ಬಲೆ ಹೃದಯದಿಂದ ಭೊಲಾ(ಮುಗ್ಧ)ಆಗಿರಿ ಆದರೆ ಮಾತು, ಕರ್ಮದಲ್ಲಿ ಸಂಪೂರ್ಣ ಮಹಾನಾತ್ಮ(ಸೇಂಟ್) ಆಗಿರಿ. ಆದರೆ ಮಾತುಗಳಲ್ಲಿ ತ್ರಿಕಾಲ ದರ್ಶಿಯಾಗಿ ಮಾತನಾಡಿ ಮತ್ತು ಕೇಳಿರಿ. ಕರ್ಮದಲ್ಲಿ ಪ್ರತೀಕರ್ಮದ ಪರಿಣಾಮವನ್ನು ಜ್ಞಾನರ್ಣವಾಗಿ ಅರ್ಥ ಮಾಡಿಕೊಂಡು ನಂತರ ಮಾಡಿರಿ. ಇದು ಆಗಬಾರದಾಗಿತ್ತು ಆದರೆ ಆಗಿಹೋಯಿತು, ಇದನ್ನು ಮಾತನಾಡಬಾರದಾಗಿತ್ತು ಆದರೆ ಮಾತನಾಡಿಬಿಟ್ಟೆವು. ಈ ರೀತಿ ಇದ್ದರೆ ಇದರಿಂದಲೇ ಸಿದ್ಧವಾಗುತ್ತದೆ- ಕರ್ಮದ ಪರಿಣಾಮವನ್ನು ಆರಿತುಕೊಳ್ಳದೇ ಭೋಲಾತನದಲ್ಲಿ ಕರ್ಮ ಮಾಡಿ ಬಿಡುತ್ತೀರಿ. ನಾವಂತೂ ಭೋಲಾ ಆಗಿದ್ದೇವೆ ಆದ್ದರಿಂದ ಈ ರೀತಿ ಆಗಿಬಿಡುತ್ತದೆ

ಎಂದು ತಿಳಿದು ತಮ್ಮನ್ನು ತಾವು ತಪ್ಪಿಸಿಕೊಳ್ಳಬೇಡಿರಿ.  ಹೃದಯದಿಂದ ಯಾರು ಭೋಲಾ ಆಗಿರುವರೋ ಅವರು ಎಲ್ಲರಿಗೂ ಪ್ರಿಯವಾಗಿರುತ್ತಾರೆ ಯಾವುದರಲ್ಲಿ ಬೋಲಾ ಆಗಬೇಕು ಎಂದು ತಿಳಿಯಿತೇ! ನಿಶ್ಚಯ ಮತ್ತು ವಿಜಯವನ್ನು ಸಮಾನ ಮಾಡಿಕೊಳ್ಳುವ ವಿಧಿ ಏನಾಯಿತು? ನಾಲ್ಕೂಕಡೆ ನಾಲ್ಕುವಿಷಯಗಳಲ್ಲಿ ಸಮಾನ ಪರ್ಸೆಂಟೇಜಿನ ನಿಶ್ಚಯವಿರಬೇಕು. ಕೆಲವು ಮಕ್ಕಳು ಮತ್ತೇನು ಹೇಳುತ್ತಾರೆಂದರೆ- ಬಾಬಾ ತಮ್ಮಲ್ಲಿ ಪೂರ್ಣನಿಶ್ಚಯವಿದೆ ಆದರೆ ನಮ್ಮಲ್ಲಿ ನಮಗೆ ಅಷ್ಟು ನಿಶ್ಚಯವಿಲ್ಲ. ಕೆಲವೊಮ್ಮೆ ಇರುತ್ತದೆ, ಇನ್ನೂ ಕೆಲವೊಮ್ಮೆ ನಿಶ್ಚಯವು ಕಡಿಮೆಯಾಗಿಬಿಡುತ್ತದೆ. ಮತ್ತೆ ಅಂತಹವರ ಭಾಷೆ ಹೇಗಿರುತ್ತದೆ? ಒಂದೇ ಗೀತೆಯನ್ನು ಹಾಡುತ್ತಾರೆ- ಗೊತ್ತಿಲ್ಲ. ಗೊತ್ತಿಲ್ಲ, ಗೊತ್ತಿಲ್ಲ... ಹೀಗೇಕೆ ಆಗುತ್ತದೆಯೋ ಗೊತ್ತಿಲ್ಲ. ನನಗೆ ಭಾಗ್ಯವು ಇದೆಯೋ ಇಲ್ಲವೋ ಗೊತ್ತಿಲ್ಲ. ತಂದೆಯ ಸಹಯೋಗವು ಸಿಗುವುದೋ ಇಲ್ಲವೋ ಗೊತ್ತಿಲ್ಲ, ಸಫಲತೆಯಾಗುವುದೋ ಇಲ್ಲವೋ ಗೊತ್ತಿಲ್ಲ.. ಹೀಗೆ ಹಾಡುತ್ತಾ ಇರುತ್ತಾರೆ. ಮಾಸ್ಟರ್ ಸರ್ವಶಕ್ತಿವಂತರು ಅಂದಮೇಲೆ ಈ ನಿಶ್ಚಯದಲ್ಲಿ ಕೊರತೆಯಿದೆ ಆದ್ದರಿಂದಲೇ ಗೊತ್ತಿಲ್ಲ, ಗೊತ್ತಿಲ್ಲ ಎಂಬ ಹಾಡನ್ನು ಹಾಡುತ್ತೀರಿ ಮತ್ತು ಮೂರನೆಯದಾಗಿ ಇನ್ನೇನು ಹೇಳುತ್ತಾರೆ? ಬಾಬಾ, ನಾವಂತೂ ತಮ್ಮನ್ನು ನೋಡಿ ವ್ಯಾಪಾರ ಮಾಡಿದೆವು. ನೀವು ನಮ್ಮವರಾಗಿದ್ದೀರಿ, ನಾವು ನಿಮ್ಮವರಾಗಿದ್ದೇವೆ. ನಾವು ಈ ಬ್ರಾಹ್ಮಣ ಪರಿವಾರವನ್ನು ನೋಡಿ ವ್ಯಾಪಾರ ಮಾಡಲಿಲ್ಲ. ಬ್ರಾಹ್ಮಣ ಪರಿವಾರವು ಕಿರಿಕಿರಿ ಮಾಡುವಂತದ್ದಾಗಿದೆ. ತಾವು ಮಾತ್ರ ಸರಿಯಿದ್ದೀರಿ. ಬ್ರಾಹ್ಮಣರ ಸಂಘಟನೆಯಲ್ಲಿ ನಡೆಯುವುದು ಕಷ್ಟಕರವಾಗಿದೆ. ತಾವು ಒಬ್ಬರೊಂದಿಗೆ ನಡೆಯುವುದು ಸಹಜವಾಗಿದೆ. ಆಗ ಬಾಪ್‌ದಾದಾ ಏನು ಹೇಳುವರು? ಬಾಪ್‌ದಾದಾ ಮುಗುಳ್ನಗುತ್ತಾರೆ. ಇಂತಹ ಮಕ್ಕಳೊಂದಿಗೆ ಬಾಪ್‌ದಾದಾರವರ ಒಂದು ಪ್ರಶ್ನೆಯಿದೆ ಏಕೆಂದರೆ ಇಂತಹ ಆತ್ಮರು ಪ್ರಸನ್ನಚಿತ್ತರಾಗಿರುವುದಿಲ್ಲ. ಹೀಗೇಕೆ, ಹಾಗೇಕೆ ಎಂದು ಬಹಳ ಪ್ರಶ್ನೆಗಳನ್ನು ಮಾಡುತ್ತಾರೆ ಅಂದಮೇಲೆ ಅವರು ಪ್ರಸನ್ನಚಿತ್ತ ಆತ್ಮರಲ್ಲ. ಪ್ರಶ್ನಚಿತ್ತ ಆತ್ಮರಾಗುತ್ತಾರೆ. ಬಾಪ್‌ದಾದಾರವರೊಂದಿಗೆ ಪ್ರಶ್ನೆ ಮಾಡುತ್ತೇನೆ- ತಾವಾತ್ಮರು ಮುಕ್ತಿಧಾಮದಲ್ಲಿ ಇರುವವರಾಗಿದ್ದೀರೋ ಅಥವಾ ಜೀವನ್ಮುಕ್ತಿಯಲ್ಲಿ ಬರುವವರಾಗಿದ್ದೀರೋ? ಮುಕ್ತಿಯಲ್ಲಿರಬೇಕು ನಂತರ ಜೀವನ್ಮುಕ್ತಿಯಲ್ಲಿ ಬರಬೇಕಲ್ಲವೆ. ಅಂದಮೇಲೆ ಜೀವನ್ಮುಕ್ತಿಯಲ್ಲಿ ಕೇವಲ ಬ್ರಹ್ಮಾತಂದೆ ಇರುವರೋ ಅಥವಾ ರಾಜಧಾನಿಯಿರುವುದೋ? ಕೇವಲ ಬ್ರಹ್ಮಾ ಮತ್ತು ಸರಸ್ವತಿಯು ರಾಜಾ-ರಾಣಿಯಾಗುವರೇ? ಜೀವನ್ಮುಕ್ತಿಯ ಆಸ್ತಿಯನ್ನು ಪಡೆಯಬೇಕಲ್ಲವೆ. ತಾವು ಛಾಲೆಂಜ್ ಮಾಡುತ್ತೀರಿ- ಆದಿಸನಾತನ ಧರ್ಮ ಮತ್ತು ಅನ್ಯಧರ್ಮಗಳಲ್ಲಿ ಎಲ್ಲದಕ್ಕಿಂತ ದೊಡ್ಡ ಅಂತರವಿದೆ. ಅವರು ಕೇವಲ ಧರ್ಮಸ್ಥಾಪನೆ ಮಾಡುತ್ತಾರೆ ಮತ್ತು ತಾವು ಧರ್ಮ ಮತ್ತು ರಾಜ್ಯ ಎರಡರ ಸ್ಥಾಪನೆ ಮಾಡುತ್ತಿದ್ದೀರಿ. ಇದು ಪಕ್ಕಾ ಇದೆಯಲ್ಲವೆ. ಧರ್ಮಸ್ಥಾಪನೆ ಮತ್ತು ರಾಜ್ಯವನ್ನೂ ಸ್ಥಾಪನೆ ಮಾಡುತ್ತಿದ್ದೀರಲ್ಲವೆ ಅಂದಮೇಲೆ ರಾಜ್ಯದಲ್ಲಿ ಏನಿರುವುದು? ಕೇವಲ ಒಬ್ಬ ರಾಜಾ, ಒಬ್ಬಳು ರಾಣಿಯಿರುತ್ತಾರೆಯೇ? ಒಬ್ಬ ರಾಜಾ ರಾಣಿ ಮತ್ತು ತಾವು ಒಬ್ಬ ಮಗು. ಈ ರೀತಿಯ ರಾಜ್ಯವಿರುತ್ತದೆಯೇ? ಅಂದಮೇಲೆ ನಾವು ರಾಜಧಾನಿಯಲ್ಲಿ ಬರಬೇಕಾಗಿದೆ ಎಂದು ನೆನಪಿಟ್ಟುಕೊಳ್ಳಿರಿ. ರಾಜಧಾನಿಯಲ್ಲಿ ಬರುವುದು ಎಂದರೆ ಬ್ರಾಹ್ಮಣ ಪರಿವಾರದಲ್ಲಿ ಸಂತುಷ್ಟರಾಗಿರುವುದು ಮತ್ತು ಸಂತುಷ್ಟಪಡಿಸುವುದು. ಶ್ರೇಷ್ಠ ಸಂಬಂಧದಲ್ಲಿ ಬರುವುದು. ಈಗ ಬಾಪ್‌ದಾದಾ ಎಲ್ಲರೊಂದಿಗೆ ಕೇಳುತ್ತೇವೆ- ತಾವು ಮಾಲೆಯಲ್ಲಿ ಬರಲು ಇಚ್ಛಿಸುತ್ತೀರಾ? ಅಥವಾ ಮಾಲೆಯಿಂದ ಹೊರಗಿದ್ದರೂ ಸರಿಯೇ ಪರವಾಗಿಲ್ಲ ಎಂದು ಹೇಳುತ್ತೀರಾ? ಮಾಲೆಯಲ್ಲಿ ಬರಬೇಕಲ್ಲವೆ 108ರ ಮಾಲೆಯಲ್ಲಾದರೂ ಬನ್ನಿರಿ. 16,000ದ ಮಾಲೆಯಲ್ಲಾದರೂ ಬನ್ನಿರಿ ಆದರೆ ಬರಲೇಬೇಕಾಗಿದೆ. ಅಥವಾ ಇಲ್ಲವೇನು? (ಹಾಂಜಿ) ಅಂದಮೇಲೆ ಈಗ ಬ್ರಾಹ್ಮಣ  ಪರಿವಾರದಿಂದ ಏಕೆ ಗಾಬರಿಯಾಗುತ್ತೀರಿ? ಯಾವುದೇ ಮಾತು ಬಂದರೆ ಏನು ಹೇಳುತ್ತೀರಿ? ಬಾಬಾ ನಮ್ಮವರಾಗಿದ್ದಾರೆ. ಸಹೋದರ-ಸಹೋದರಿಯರು ಏನು ಮಾಡುತ್ತಾರೆ? ನಾವು ಸಹೋದರ-ಸಹೋದರಿಯರೊಂದಿಗೆ ಪ್ರತಿಜ್ಞೆ ಮಾಡಿಲ್ಲ ಎಂದು ಹೇಳುತ್ತೀರಿ. ಆದರೆ ಈ ಬ್ರಾಹ್ಮಣ ಜೀವನವು ಶುದ್ಧ ಸಂಬಂಧದ ಜೀವನವಾಗಿದೆ. ಮಾಲೆಯ ಜೀವನವಾಗಿದೆ. ಮಾಲೆಯ ಅರ್ಥವೇ ಆಗಿದೆ- ಸಂಘಟನೆ ಬ್ರಾಹ್ಮಣ ಪರಿವಾರದ ನಿಶ್ಚಯದಲ್ಲಿ ಒಂದುವೇಳೆ ಯಾವುದೇ ಸಂಶಯ ಬಂದುಬಿಡುತ್ತದೆ. ವ್ಯರ್ಥಸಂಕಲ್ಪ ಬರುತ್ತದೆಯೆಂದರೆ ಅದು ನಿಶ್ಚಯವನ್ನು ಅಲುಗಾಡಿಸಿಬಿಡುತ್ತದೆ. ಏರುಪೇರಿನಲ್ಲಿ ತರುತ್ತದೆ. ಬಾಬಾ ಒಳ್ಳೆಯವರು, ಜ್ಞಾನ ಒಳ್ಳೆಯದು ಆದರೆ ಈ ದಾದಿಯರು ಒಳ್ಳೆಯವರಲ್ಲ, ನಿಮಿತ್ತ ಶಿಕ್ಷಕಿಯರು ಒಳ್ಳೆಯವರಲ್ಲ, ಪರಿವಾರ

ಒಳ್ಳೆಯದಲ್ಲ, ಇವು ನಿಶ್ಚಯಬುದ್ಧಿಯವರ ಮಾತುಗಳೇ? ಆ ಸಮಯದಲ್ಲಿ ನಿಶ್ಚಯಬುದ್ಧಿಯವರೆಂದು ಹೇಳುವುದೇ? ಅಥವಾ ಸಂಶಯಬುದ್ಧಿಯವರೆಂದು ಹೇಳುವುದೇ? ವ್ಯರ್ಥ ಸಂಕಲ್ಪಗಳು ಪ್ರಸನ್ನಚಿತ್ತ ಬುದ್ಧಿಯವರನ್ನಾಗಿ ಇರಲು ಬಿಡುವುದಿಲ್ಲ ಅಂದಮೇಲೆ ನಿಶ್ಚಯದ ವಿಶೇಷತೆ ಏನೆಂದು ತಿಳಿಯಿತೆ? ನಾಲ್ಕನೆಯದಾಗಿ ಇನ್ನೇನು ವಾರ್ತಾಲಾಪ ಮಾಡುತ್ತಾರೆ? ಸಮಯವೂ ಶ್ರೇಷ್ಠವಾಗಿದೆ. ಪುರುಷೋತ್ತಮ ಯುಗವಾಗಿದೆ. ಆತ್ಮ-ಪರಮಾತ್ಮನ ಮಿಲನದ ಯುಗವಾಗಿದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಆದರೆ ಮತ್ತೇನು ಹೇಳುತ್ತಾರೆ? ಇನ್ನೂ ಸ್ವಲ್ಪಸಮಯವು ಇದ್ದೇ ಇದೆ. ಅಷ್ಟರಲ್ಲಿಯೇ ವಿನಾಶವಂತೂ ಆಗುವುದಿಲ್ಲ. ವಿನಾಶವಾಗುವುದು ನಂತರದ ದೀಪಾವಳಿಯನ್ನು ನೋಡುವುದಿಲ್ಲ ಎಂಬ ಮಾತನ್ನು ಸ್ಥಾಪನೆಯ ಸಮಯದಿಂದಲೂ ಹೇಳುತ್ತಲೇ ಬಂದಿದ್ದಾರೆ, ವಿನಾಶದ ಮಾತುಗಳು ಯಜ್ಞಸ್ಥಾಪನೆಯ ಸಮಯದಿಂದಲೂ ನಡೆಯುತ್ತಾ ಬಂದಿದೆ. ವಿನಾಶವೆಂದು ಹೇಳುತ್ತಾ-ಹೇಳುತ್ತಾ ಎಷ್ಟೊಂದು ವರ್ಷಗಳಾಗಿಹೋಯಿತು. ಇನ್ನೂ ಯಾವಾಗ ವಿನಾಶವಾಗುವುದೋ ಗೊತ್ತಿಲ್ಲ. ಸ್ವಲ್ಪ ಹುಡುಗಾಟಿಕೆಯ, ಆಲಸ್ಯದ, ಡೀಲಾ ಪುರುಷಾರ್ಥದ ಡನ್‌ಲಪ್ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯೋಣ, ಸಮಯದಲ್ಲಿ ಸರಿಹೋಗುತ್ತೇವೆ ಎಂದು ತಿಳಿಯುತ್ತಾರೆ. ತಂದೆಗೂ ಸಹ ಇದನ್ನು ಪಕ್ಕಾ ಮಾಡಿಸುತ್ತಾರೆ- ಬಾಬಾ, ಬೇಕಾದರೆ ತಾವು ನೋಡಿರಿ ನಾವು ಸಮಯದಲ್ಲಿ ಬಹಳ ಮುಂದೆ ಹೋಗಿಬಿಡುತ್ತೇವೆ ಆದರೆ ಬಾಪ್‌ದಾದಾ ಇಂತಹ ಮಕ್ಕಳಿಗೆ ಸದಾ ಸಾವಧಾನ ನೀಡುತ್ತಾರೆ- ಸಮಯ ಬಂದಾಗ ಜಾಗೃತರಾಗುವುದು ಮತ್ತು ಸಮಯ ಪ್ರಮಾಣ ಪರಿವರ್ತನೆ ಮಾಡಿಕೊಂಡರೆ ಅದೇನೂ ದೊಡ್ಡ ಮಾತಲ್ಲ ಆದರೆ ಸಮಯಕ್ಕಿಂತ ಮೊದಲೇ ಪರಿವರ್ತನೆ ಮಾಡಿಕೊಂಡರೆ ತಮ್ಮ ಪುರುಷಾರ್ಥದಲ್ಲಿ ಈ ಪುರುಷಾರ್ಥದ ಅಂಕಗಳು ಜಮಾ ಆಗುವುದು ಮತ್ತು ಒಂದುವೇಳೆ ಸಮಯ ಬಂದಾಗ ಪರಿವರ್ತನೆಯಾದರೆ ಸಮಯಕ್ಕೆ ಅಂಕಗಳು ಸಿಗುವುದು, ತಮಗೆ ಸಿಗುವುದಿಲ್ಲ ಅಂದಾಗ ಪೂರ್ಣ ಫಲಿತಾಂಶದಲ್ಲಿ ಹುಡುಗಾಟಿಕೆ ಮತ್ತು ಆಲಸ್ಯದ ನಿದ್ರೆಯ ಕಾರಣ ಮೋಸಹೋಗುತ್ತೀರಿ. ಇದೂ ಸಹ ಕುಂಭಕರ್ಣನ ನಿದ್ರೆಯ ಅಂಶವಾಗಿದೆ. ದೊಡ್ಡ ಕುಂಭಕರ್ಣನಲ್ಲ, ಚಿಕ್ಕ ಕುಂಭಕರ್ಣ. ಮತ್ತೆ ಕುಂಭಕರ್ಣನಿಗೆ ಏನಾಯಿತು? ತನ್ನನ್ನೇ ಉಳಿಸಿಕೊಳ್ಳಲಾಗಲಿಲ್ಲ ಅಲ್ಲವೆ! ಹಾಗೆಯೇ ಅಂತಿಮ ಸಮಯದಲ್ಲಿಯೂ ತಮ್ಮನ್ನು ಪೂರ್ಣ ಉತ್ತೀರ್ಣರಾಗಲು ಯೋಗ್ಯರನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ತಿಳಿಯಿತೆ- ಕೆಲವೊಮ್ಮೆ ಬಹಳ ಸಾಹಸದ ವಾರ್ತಾಲಾಪ ಮಾಡುತ್ತೀರಿ, ಕೆಲವೊಮ್ಮೆ ತುಂಟಾಟದ ವಾರ್ತಾಲಾಪ ಮಾಡುತ್ತೀರಿ. ಇನ್ನೂ ಕೆಲವೊಮ್ಮೆ ಕಿರಿಕಿರಿಯ ವಾರ್ತಾಲಾಪ ಮಾಡುತ್ತೀರಿ.

ಇಂದು ಈ ವರ್ಷದ ಸೀಜನ್ನಿನ ಸಮಾಪ್ತಿಯಾಗಿದೆ. ಸಮಾಪ್ತಿಯೆಂದು ಹೇಳುವುದಿಲ್ಲ ಸಂಪನ್ನವಾಗುತ್ತಿದೆ ಆದ್ದರಿಂದ ಫಲಿತಾಂಶವನ್ನೂ ತಿಳಿಸುತ್ತಿದ್ದೇವೆ ಅಂದಮೇಲೆ ಈಗ ಏನು ಮಾಡಬೇಕಾಗಿದೆ? ಪರಿಶೀಲನೆ ಮಾಡಿಕೊಳ್ಳಿರಿ- ನಿಶ್ಚಯದ ತಳಪಾಯದ ನಾಲ್ಕೂಕಡೆ ಬಲವಾಗಿದೆಯೇ ಅಥವಾ ನಾಲ್ಕರಲ್ಲಿ ಯಾವುದೇ ಮಾತಿನಲ್ಲಿ ಧೃಡತೆಯ ಬದಲು ವಿಷಯಗಳ ಕಾರಣ ನಿರ್ಬಲವಾಗಿದ್ದರೆ ಅದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಈಗ ಇನ್ನೂ ತಪಸ್ಸು ಮಾಡಬೇಕಲ್ಲವೆ. ಮೊದಲೂ ತಿಳಿಸಿದೆವು- ಪ್ರೀತಿಗೆ ಪ್ರತ್ಯಕ್ಷ ಪ್ರಮಾಣವನ್ನು ಕೊಡಬೇಕಾಗಿದೆ ಮತ್ತು ಪ್ರೀತಿಯ ಪ್ರತ್ಯಕ್ಷ ಪ್ರಮಾಣವು ಸಮಾನರಾಗುವುದಾಗಿದೆ ಮತ್ತು ಎರಡನೆಯದಾಗಿ ಇನ್ನೇನು ಮಾಡಬೇಕಾಗಿದೆ? ಈ ವರ್ಷದ ಹೋಮ್‌ವರ್ಕ್ ಕೊಡುತ್ತಿದ್ದೇವೆ- ಒಂದು ಮಾತನ್ನಂತೂ ಕೇಳಿದಿರಿ. ಎರಡನೆಯ ಮಾತು ತಮ್ಮ ನಾಲ್ಕೂ ಕಡೆಯ ತಳಪಾಯವನ್ನು ಬಲಪಡಿಸಿಕೊಳ್ಳಿರಿ. ಒಂದು ಮಾತಿನಲ್ಲಿಯೂ ನಿರ್ಬಲತೆಯಿರಬಾರದು ಆಗ ಮಾಲೆಯ ಮಣಿಯಾಗಿ ಪೂಜ್ಯ ಅತ್ಮ ಹಾಗೂ ರಾಜ್ಯಾಧಿಕಾರಿ ಅತ್ಮನಾಗುವಿರಿ ಏಕೆಂದರೆ ಬ್ರಾಹ್ಮಣರಿಂದ ದೇವತೆಗಳಾಗಬೇಕಾಗಿದೆ. ಬ್ರಾಹ್ಮಣರಾಗದೆ ದೇವತೆಯಾಗಲು ಸಾಧ್ಯವಿಲ್ಲ. ಬ್ರಾಹ್ಮಣರೊಂದಿಗೆ ಸಂಬಂಧ ನಿಭಾಯಿಸುವುದು ಅರ್ಥಾಥ್ ದೈವೀರಾಜ್ಯದ ಅಧಿಕಾರಿಗಳಾಗುವುದು ಆದ್ದರಿಂದ ಪರಿವಾರದೊಂದಿಗೆ ನಿಭಾಯಿಸಬೇಕಾಗುವುದು. ಏರುಪೇರುಗಳನ್ನು ಸಮಾಪ್ತಿ ಮಾಡಬೇಕಾಗುವುದು ಆಗಲೇ ನಿಶ್ಚಯ ಮತ್ತು ವಿಜಯ ಎರಡರ ಸಮಾನತೆಯಾಗುವುದು. ಈ ಅಂತರವನ್ನು ಕಳೆಯುವ ಮಹಾಮಂತ್ರವಾಗಿದೆ- ನಾಲ್ಕೂಕಡೆ ಬಲಶಾಲಿ ಆಗುವುದು. ನಾಲ್ಕು ವಿಷಯಗಳ ನಿಶ್ಚಯದ ಪರ್ಸೆಂಟೇಜನ್ನು ಸಮಾನ ಮಾಡಿಕೊಳ್ಳುವುದು ತಿಳಿಯಿತೆ- ಹೋಮ್‌ವರ್ಕ್ ಸ್ಪಷ್ಟವಾಯಿತಲ್ಲವೆ. ಒಳ್ಳೆಯ ವಿದ್ಯಾರ್ಥಿಗಳಾಗಿದ್ದೀರಲ್ಲವೆ! ಅಥವಾ ನಮ್ಮ ಸೇವಾಕೇಂದ್ರಕ್ಕೆ ಹೋದೆವು, ಪ್ರವೃತ್ತಿಯ ಮನೆಯಲ್ಲಿ

ಹೋಗುತ್ತಿದ್ದಂತೆಯೇ  ಹೋಮ್‌ವರ್ಕನ್ನು ಮನೆಯಲ್ಲಿಯೇ ಇಟ್ಟು ಬಂದೆವು ಎಂದು ಹೇಳುವುದಿಲ್ಲ ತಾನೆ. ಬುದ್ಧಿವಂತ ವಿದ್ಯಾರ್ಥಿಗಳ ಲಕ್ಷಣವೇನು? ಹೋಮ್‌ವರ್ಕ್ ನಲ್ಲಿಯೂ ನಂಬರ್‌ವನ್ ಮತ್ತು ಪ್ರಾಕ್ಟಿಕಲ್ ವಿದ್ಯೆಯಲ್ಲಿಯೂ ನಂಬರ್‌ವನ್ ಏಕೆಂದರೆ ಅಂಕಗಳು ಜಮಾ ಆಗುತ್ತವೆ. ಒಳ್ಳೆಯದು- ಮತ್ತಾವ ಫಲಿತಾಂಶವನ್ನು ನೋಡಿದೆವು ವರ್ತಮಾನ ಸಮಯದಲ್ಲಿ ಮಕ್ಕಳ ಎರಡು ಬುದ್ದಿವಂತಿಕೆಗಳನ್ನು ನೋಡಿದೆವು- ತಮ್ಮ ಬುದ್ಧಿವಂತಿಕೆಯನ್ನು ತಿಳಿದುಕೊಂಡಿರುತ್ತೀರಲ್ಲವೇ?ಮೊದಲನೆಯದಾಗಿ ಯಾವ ಬುದ್ದಿವಂತಿಕೆಯನ್ನು ನೋಡಿರಬಹುದು. ಸ್ವಯಂನ್ನು ನೋಡಿಕೊಳ್ಳುವುದು ಮತ್ತು ಪರರನ್ನು ನೋಡುವುದು. ಸ್ವದರ್ಶನ ಚಕ್ರಧಾರಿಗಳಾಗುವುದು ಹಾಗೂ ಪರದರ್ಶನ ಚಕ್ರಧಾರಿಗಳಾಗುವುದು. ಎರಡು ವಿಷಯಗಳಲ್ಲವೆ. ಮೆಜಾರಿಟಿ ಯಾವುದರಲ್ಲಿ ಬುದ್ಧಿವಂತರಾಗಿದ್ದಾರೆ? ಬಾಪ್‌ದಾದಾ ಮೊದಲೂ ತಿಳಿಸಿದ್ದೇವೆ ಕೆಲವು ಮಕ್ಕಳ ಸಮೀಪ ದೃಷ್ಟಿಯು ತೀಕ್ಷ್ಣವಾಗುತ್ತಿದೆ ಮತ್ತು ಇನ್ನೂ ಕೆಲವರ ದೂರದೃಷ್ಟಿಯು ತೀಕ್ಷ್ಣವಾಗುತ್ತಿದೆ ಆದರೆ ಮೆಜಾರಿಟಿ ಮಕ್ಕಳ ದೂರದೃಷ್ಟಿಯು ತೀಕ್ಷ್ಮವಾಗಿದೆ. ಸಮೀಪ ದೃಷ್ಟಿಯು ಸ್ವಲ್ಪ ಸಡಿಲವಾಗಿದೆ. ನೋಡಿಕೊಳ್ಳಬಯಸುತ್ತಾರೆ ಆದರೆ ಸ್ಪಷ್ಟವಾಗಿ ನೋಡಿಕೊಳ್ಳಲು ಆಗುವುದಿಲ್ಲ ಮತ್ತು ಯಾವ ಬುದ್ಧಿವಂತಿಕೆ ತೋರಿಸುತ್ತಾರೆ? ಯಾವುದೇ ವಿಷಯ ಬಂದಾಗ ತಮ್ಮನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲು ಅನ್ಯರ ಮಾತುಗಳನ್ನು ದೊಡ್ಡದು ಮಾಡಿ ಸ್ಪಷ್ಟವಾಗಿ ತಿಳಿಸುತ್ತಾರೆ. ತಮ್ಮ ದೊಡ್ಡಮಾತನ್ನು ಚಿಕ್ಕದು ಮಾಡುತ್ತಾರೆ ಮತ್ತು ಅನ್ಯರ ಚಿಕ್ಕಮಾತನ್ನು ದೊಡ್ಡದಾಗಿ ಮಾಡಿ ಹೇಳುತ್ತಾರೆ. ಮೆಜಾರಿಟಿ ಮಕ್ಕಳಲ್ಲಿ ಈ ಬುದ್ಧಿವಂತಿಕೆಯನ್ನು ನೋಡಿದೆವು. ಎರಡನೇ ಬುದ್ದಿವಂತಿಕೆ ಏನಿರಬಹುದು? ಇತ್ತೀಚೆಗೆ ಒಂದು ವಿಶೇಷ ಭಾಷೆಯನ್ನು ಬಹಳ ಉಪಯೋಗಿಸುತ್ತಾರೆ- **ನಮ್ಮಿಂದ ಅಸತ್ಯವನ್ನು ನೋಡಲಾಗುವುದಿಲ್ಲ. ಅಸತ್ಯವನ್ನು ಕೇಳಲಾಗುವುದಿಲ್ಲ ಆದ್ದರಿಂದ ಅಸತ್ಯವನ್ನು ನೋಡಿ. ಅಸತ್ಯವನ್ನು ಕೇಳಿ ಒಳಗಡೆ ಆವೇಶ ಬಂದುಬಿಡುತ್ತದೆ ಅಂದಮೇಲೆ ಈ ಭಾಷೆಯು ಸರಿಯೇ? ಒಂದುವೇಳೆ ಅವರು ಅಸತ್ಯವಾಗಿದ್ದಾರೆ ಮತ್ತು ಅವರ ಅಸತ್ಯವನ್ನು ನೋಡಿ ತಮಗೆ ಆವೇಶ ಬರುತ್ತದೆಯೆಂದರೆ ಆವೇಶವು ಸತ್ಯವೋ ಅಥವಾ ಅಸತ್ಯವೋ? ಆವೇಶವಂತೂ ಅಸತ್ಯವಲ್ಲವೆ! ನಾವು ಇದನ್ನು ಮಾಡಿ ತೋರಿಸುತ್ತೇವೆ. ಈ ಛಾಲೆಂಜ್ ಮಾಡುವುದು ಸರಿಯೇ? ಸದಾ ಇದನ್ನು ನೆನಪಿಟ್ಟುಕೊಳ್ಳಿ- ಸತ್ಯತೆಯ ಚಿಹ್ನೆ ಏನಾಗಿದೆ! ಯಾರು ಸ್ವಯಂ ಸತ್ಯತೆಯಲ್ಲಿರುತ್ತಾರೆಯೋ ಅವರು ಅಸತ್ಯವನ್ನು ಸಮಾಪ್ತಿ ಮಾಡಲು ಬಯಸುತ್ತಾರೆ. ಲಕ್ಷ್ಯವಂತೂ ಬಹಳ ಚೆನ್ನಾಗಿದೆ ಆದರೆ ಅಸತ್ಯತೆಯನ್ನು ಸಮಾಪ್ತಿ ಮಾಡಲು ತಮ್ಮಲ್ಲಿಯೂ ಸತ್ಯತೆಯ ಶಕ್ತಿಯು ಬೇಕು ಆವೇಶ ಅಥವಾ ರೋಷ ಇದು ಸತ್ಯತೆಯ ಚಿಹ್ನೆಯೇ ಸತ್ಯತೆಯಲ್ಲಿ ಆವೇಶ ಬರುವುದೇ? ಅಂದಾಗ ಒಂದುವೇಳೆ ಅಸತ್ಯವನ್ನು ನೋಡಿ ನನಗೆ ಕೋಪ ಬರುತ್ತದೆಯೆಂದರೆ ಅದು ಸರಿಯೇ? ಯಾರಾದರೂ ಬೆಂಕಿ ಹಚ್ಚಿದರೆ ಶಾಖವು ಬರುವುದಿಲ್ಲವೇ ಅಥವಾ ಶಾಖದಿಂದ ಮುಕ್ತರಾಗಬಲ್ಲಿರಾ? ಒಂದುವೇಳೆ ಇದು ಅಸತ್ಯತೆಯು ಬೆಂಕಿಯಾಗಿದೆ ಎಂಬುದು ನಮ್ಮಲ್ಲಿ ಜ್ಞಾನವು ಇದ್ದಿದ್ದೇ ಆದರೆ ಮತ್ತು ಆ ಬೆಂಕಿಯ ಶಾಖ ತಗುಲಿದರೆ ಮೊದಲೇ ಅದರಿಂದ ತಮ್ಮನ್ನು ತಾವು ಸುರಕ್ಷಿತ ಮಾಡಿಕೊಳ್ಳುತ್ತೀರಲ್ಲವೆ ಅಥವಾ ಬೆಂಕಿಯಲ್ಲಿ ಸ್ವಲ್ಪ ಸುಟ್ಟುಹೋದರೂ ಪರವಾಗಿಲ್ಲ ಎಂದು ಹೇಳುತ್ತೀರಾ?** ಆದ್ದರಿಂದ ಸದಾ ಇದನ್ನು ನೆನಪಿಟ್ಟುಕೊಳ್ಳಿರಿ- ಸತ್ಯತೆಯ ಚಿಹ್ನೆಯು ಸಭ್ಯತೆಯಾಗಿದೆ. ಒಂದುವೇಳೆ ತಾವು ಸತ್ಯವಾಗಿದ್ದೀರಿ. ತಮ್ಮಲ್ಲಿ ಸತ್ಯತೆಯ ಶಕ್ತಿಯಿದೆ ಎನ್ನುವುದಾದರೆ ಸಭ್ಯತೆಯನ್ನು ಎಂದೂ ಬಿಡುವುದಿಲ್ಲ. ಸತ್ಯತೆಯನ್ನು ಸಿದ್ಧ ಮಾಡಿರಿ ಆದರೆ ಸಭ್ಯತಾಪೂರ್ವಕವಾಗಿ ಸಿದ್ಧ ಮಾಡಿ. ಒಂದುವೇಳೆ ಸಭ್ಯತೆಯನ್ನು ಬಿಟ್ಟು ಅಸಭ್ಯತೆಯಲ್ಲಿ ಬಂದು ಸತ್ಯತೆಯನ್ನು ಸಿದ್ಧ ಮಾಡಬಯಸುತ್ತೀರೆಂದರೆ ಆ ಸತ್ಯವು ಸಿದ್ಧವಾಗುವುದಿಲ್ಲ. ತಾವು ಸತ್ಯವನ್ನು ಸಿದ್ಧ ಮಾಡಲು ಬಯಸುತ್ತೀರಿ ಆದರೆ ಸಭ್ಯತೆಯನ್ನು ಬಿಟ್ಟು ಒಂದುವೇಳೆ ಸತ್ಯತೆಯನ್ನು ಸಿದ್ಧಮಾಡುತ್ತೀರೆಂದರೆ ಅದು ಜಿದ್ದು(ಹಠ) ಆಗಿಬಿಡುವುದು. ಸಿದ್ಧವಲ್ಲ ಅಸಭ್ಯತೆಯ ಚಿಹ್ನೆಯಾಗಿದೆ- ಜಿದ್ದು ಮಾಡುವುದು ಮತ್ತು ಸಭ್ಯತೆಯ ಚಿಹ್ನೆಯಾಗಿದೆ- ನಿರ್ಮಾನರಾಗಿರುವುದು ಸತ್ಯತೆಯನ್ನು ಸಿದ್ದ ಮಾಡುವವರು ಸದಾ ಸ್ವಯಂ ನಿರ್ಮಾನರಾಗಿ ಸಭ್ಯತಾಪೂರ್ವಕವಾಗಿ ವ್ಯವಹರಿಸುವರು. ಎರಡನೇ ಬುದ್ದಿವಂತಿಕೆ ತಿಳಿಯಿತೆ- ಇಂತಹ ಬುದ್ಧಿವಂತರಾಗಬೇಡಿ. ಇದೂ ಸಹ ಹೋಮ್‌ವರ್ಕ್ ಆಗಿದೆ- ಇಂತಹ ಬುದ್ಧಿವಂತಿಕೆಯನ್ನು ಬಿಟ್ಟು ನಿರ್ಮಾನರಾಗಿರಿ. ಸಂಪೂರ್ಣ ನಿರ್ಮಾನರಾಗಿರಿ. ನಾನು ಸರಿಯಾಗಿದ್ದೇನೆ ಇವರು ತಪ್ಪಾಗಿದ್ದಾರೆ. ಇದು ನಿರ್ಮಾನತೆಯಲ್ಲ, ಪ್ರಪಂಚದವರೂ ಸಹ ಇದನ್ನು ಹೇಳುತ್ತಾರೆ- ಒಂದುವೇಳೆ

ಯಾರಾದರೂ ಸತ್ಯವನ್ನು ಸಿದ್ಧ ಮಾಡುತ್ತಾರೆಂದರೆ ಅದರಲ್ಲಿ ಬೇರೇನೋ ಅಲ್ಪಸ್ವಲ್ಪ ಸಮಾವೇಶವಾಗಿದೆ ಎಂದು ಕೆಲವು ಮಕ್ಕಳದು ಇದೇ ಭಾಷೆಯಾಗಿಬಿಟ್ಟಿದೆ- ನಾನು ಸಂಪೂರ್ಣ - ಸತ್ಯವನ್ನು ಹೇಳುತ್ತೇನೆ, 100% ಸತ್ಯವನ್ನು ಹೇಳುತ್ತೇನೆ ಎನ್ನುತ್ತಾರೆ ಆದರೆ ಸತ್ಯವನ್ನು ಸಿದ್ಧ ಮಾಡುವ ಅವಶ್ಯಕತೆಯಿಲ್ಲ. ಸತ್ಯತೆಯೆಂಬುದು ಸೂರ್ಯನಂತೆ ಯಾರೂ ಮುಚ್ಚಿಡಲು ಸಾಧ್ಯವಿಲ್ಲ. ಭಲೆ ಎಷ್ಟಾದರೂ ಗೋಡೆಗಳು ಯಾವುದೇ ಬೆಂಕಿಯನ್ನು ತರಲಿ ಆದರೆ ಸತ್ಯತೆಯ ಪ್ರಕಾಶವನ್ನೆಂದೂ ಮುಚ್ಚಿಡಲು ಸಾಧ್ಯವಿಲ್ಲ. ಸತ್ಯವಾದ ವ್ಯಕ್ತಿಯು ಎಂದೂ ಸಹ ತನ್ನನ್ನು ನಾನು ಸತ್ಯವಂತನಾಗಿದ್ದೇನೆ ಎಂದು ಹೇಳಿಕೊಳ್ಳುವುದಿಲ್ಲ. ಅವರನ್ನು ನೋಡಿ ತಾವು ಸತ್ಯವಂತರಾಗಿದ್ದೀರಿ ಎಂದು ಅನ್ಯರು ಹೇಳುವರು. ನಿಮ್ಮೆಲ್ಲರಿಗೂ ನಗು ಬರುವ ಮತ್ತೊಂದು ವಿಷಯವನ್ನು ಹೇಳಲೇ! ಕೇಳಬೇಕೆಂಬ ಆಸಕ್ತಿ ಬಹಳ ಇದೆ. ಕೇವಲ ಕೇಳುವುದಲ್ಲ ಮಾಡಬೇಕು ಕೂಡ.

ಬಾಪ್‌ದಾದಾರವರಿಗೆ ಒಂದು ವಿಷಯದ ಬಗ್ಗೆ ಬಹಳ ನಗು ಬರುತ್ತದೆ. ವರ್ತಮಾನ ಸಮಯದಲ್ಲಿ ಕೆಲವು ಮಕ್ಕಳ ಸಮಾಚಾರ ಯಾವ ರೀತಿ ಬರುತ್ತದೆ ಎಂದರೆ ತಂದೆಯೊಂದಿಗೆ ಕೂಡ ಚಾಲೆಂಜ್ ಮಾಡುತ್ತಿದ್ದಾರೆ. ಟೀಚರ್ಸನ್ನು ಬದಲಾಯಿಸುತ್ತೇನೆ ಎಂದಿರುವಿರಿ ತಾನೆ? ಬಾಬಾ ಈಗೇನು ಮಾಡುತ್ತಾರೋ ನೋಡೋಣ. ಹೇಳಿದ್ದನ್ನು ಮಾಡುತ್ತಾರೋ ಅಥವಾ ಇಲ್ಲವೋ ನೋಡೋಣ. ಬಾಬಾ ಮಾಡುತ್ತಾರೋ ಇಲ್ಲವೋ... ಹೇಳಿದ ಮೇಲೆ ಮಾಡಲೇಬೇಕು ಎಂಬ ಚಾಲೆಂಜನ್ನು ಮಾಡುತ್ತೀರಾ? ಬಾಬಾ ಏನನ್ನು ಮಾಡಬೇಕು ಎಂದುಕೊಂಡಿರುವರೋ ಅದು ಯಾರೋ ಹೇಳುವುದರಿಂದ ಮಾಡುವುದಿಲ್ಲ ಮತ್ತು ಯಾರೋ ಬೇಡ ಎಂದಾಗ ಬಿಡುವುದಿಲ್ಲ ಆದರೆ ತಂದೆಗೆ ಕೂಡಾ ಚಾಲೆಂಜಿನೊಂದಿಗೆ ಕೂಡಿರುವ ಬಹಳ ಉತ್ತರಗಳು ಬರುತ್ತವೆ. ಟೀಚರ್ಸ್ ಎಂದರೆ ಕೋಪ ಇರುವವರಿಗೆ ಬಹಳ ದೊಡ್ಡ ಅವಕಾಶ. **ಕಲ್ಯಾಣಕಾರಿ ಬಾಬಾ ಏನನ್ನು ಮಾಡುತ್ತಾರೋ ಆ ಪ್ರತಿಯೊಂದು ಕಾರ್ಯದಲ್ಲಿ ಕಲ್ಯಾಣವು ಸಮಾವೇಶವಾಗಿ ಇರುತ್ತದೆ. ಎಂಬುದನ್ನು ಮರೆತು ಹೋಗುತ್ತಿದ್ದಾರೆ ಮತ್ತು ಸಲಹೆಗಳೊಂದಿಗೆ ಕೂಡಿರುವ ಉತ್ತರಗಳನ್ನು ಬರೆಯುತ್ತಿದ್ದಾರೆ. ಬಾಬಾ ನೀವು ತಪ್ಪದೆ ಮಾಡಬೇಕು ಎಂದು ತಂದೆಗೆ ಕೂಡ ಶಿಕ್ಷಕರಾಗಿ ಬಿಡುತ್ತಿದ್ದಾರೆ. ತಂದೆ ತನ್ನ ಇಂತಹ ಮಕ್ಕಳಿಗೆ ಶುಭಾಶಯಗಳಗಳನ್ನು ಕೊಡುತ್ತಿದ್ದಾರೆ. ಆದರೆ ಸ್ವಯಂ ಅನ್ನು ಸದಾ ನಿಯಮದಲ್ಲಿ ನಡೆಸುತ್ತಾ ಮುಂದಕ್ಕೆ ಸಾಗುತ್ತಿರಿ. ಸಭ್ಯತಾ ಪೂರ್ವಕ ಮಾತು ಮತ್ತು ಸಭ್ಯತಾ ಪೂರ್ವಕ ನಡವಳಿಕೆಯಿಂದ ಸಫಲತೆ ಇರುತ್ತದೆ. ಸತ್ಯತೆ ಇದ್ದು ಸಭ್ಯತೆ ಇಲ್ಲದಿದ್ದರೆ ಸಫಲತೆ ಲಭಿಸುವುದಿಲ್ಲ. ಸಫಲತೆ ಲಭಿಸದಿದ್ದರೆ ಇನ್ನಷ್ಟು ಆವೇಶದಲ್ಲಿ ಬರುತ್ತೀರಿ. ಆವೇಶದಲ್ಲಿ ಯಾರಿಗೂ ಅರಿವು ಇರುವುದಿಲ್ಲ ಏನು ಮಾಡುತ್ತಿದ್ದಾರೋ, ಏನು ಹೇಳುತ್ತಿದ್ದಾರೋ ಅವರಿಗೇ ತಿಳಿಯದಂತೆ ಇರುತ್ತದೆ. ಆಗ ಮೂರ್ಛಿತರನ್ನಾಗಿ ಮಾಡಲು ಮಾಯಗೆ ಅವಕಾಶ ಸಿಗುತ್ತದೆ. ಆದ್ದರಿಂದ ಒಂದು ವೇಳೆ ಯಾವುದಾದರೂ ಅಸತ್ಯ ವಿಷಯವನ್ನು ಕೇಳಿದಾಗಲೂ ನೋಡಿದಾಗಲೂ ಅಸತ್ಯ ವಾಯುಮಂಡಲವನ್ನು ವ್ಯಾಪಿಸಬೇಡಿ. ಇದು ಪಾಪಕರ್ಮ. ಈ ಪಾಪ ಕರ್ಮ ನಾವು ನೋಡಲಾಗುತ್ತಿಲ್ಲ ಎನ್ನುತ್ತಿದ್ದೀರಿ ಆದರೆ ಅಸತ್ಯ ವಿಷಯಗಳನ್ನು ನೀವು ವಾಯುಮಂಡಲದಲ್ಲಿ ವ್ಯಾಪಿಸುವುದು ಎಂತಹ ಕರ್ಮವಾಗಿದೆ ಇದನ್ನು ಏನೆಂದು ಕರೆಯುತ್ತಾರೆ ಅದು ಪುಣ್ಯಕರ್ಮವೇ? ಪುಣ್ಯವೇ? ಅಸತ್ಯವನ್ನು ನೋಡಿದ್ದೀರಿ ಅಥವಾ ಕೇಳಿದ್ದೀರಿ ಆದರೂ ಕೂಡ ಎಲ್ಲರೂ ನಿಮ್ಮ ಪರಿವಾರವೇ ತಾನೇ ಲೌಕಿಕ ಪರಿವಾರವಾದರೂ ಒಂದು ವೇಳೆ ಇಂತಹ ವಿಷಯಗಳನ್ನು ಕೇಳಿದರೂ ಅಥವಾ ನೋಡಿದರೂ ಏನು ಮಾಡುತ್ತೀರಿ, ವ್ಯಾಪಿಸುತ್ತೀರಾ? ವಾರ್ತಾ ಪತ್ರಿಕೆಗಳಲ್ಲಿ ಹಾಕಿಸುತ್ತೀರಾ? ಕಿವಿಯಿಂದ ಕೇಳುತ್ತೀರಿ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೀರಿ. ಆದ್ದರಿಂದ ವ್ಯರ್ಥ ವಿಷಯಗಳನ್ನು ವ್ಯಾಪಿಸುವುದು ಕೂಡ ಪಾಪದ ಅಂಶ. ಇಂತಹ ಚಿಕ್ಕ ಚಿಕ್ಕ ಪಾಪಗಳು ಹಾರುವ ಕಲೆಯ ಅನುಭವವನ್ನು ಸಮಾಪ್ತಿ ಮಾಡುತ್ತವೆ. ಆದ್ದರಿಂದ ಎಲ್ಲದಕ್ಕಿಂತಲೂ ಭಾರವಾಗಿರುವುದು ಪಾಪ ಆದ್ದರಿಂದ ಪಾಪದ ಅಂಶ ಇರುವವರು ಹೇಗೆ ಹಾರಬಲ್ಲಿರಿ?** ಭಾರವಾಗಿರುವವರು ಹಾರಲಾಗುತ್ತದೆಯೇ ಇಂದಿನ ದಿನಗಳಲ್ಲಿ ಬಹಳ ಸೂಕ್ಷ್ಮ ಭಾಷೆಯಿಂದ ಇಂತಹ ವಿಷಯಗಳನ್ನು ವ್ಯಾಪಿಸುತ್ತಿದ್ದಾರೆ. ಹೊಸ ಸಮಾಚಾರವನ್ನು ತಂದಿದ್ದೇನೆ. ನೀವು ಬಹಳ ಮುಗ್ಧರು ನಿಮಗೆ ಯಾವ ವಿಷಯಗಳು ತಿಳಿದಿಲ್ಲ ಎಂದು ಹೇಳುತ್ತಾರೆ. ನಮ್ಮನ್ನು ನೋಡಿರಿ ನಿಮಗೆ ಗೊತ್ತೇ ಎನ್ನುತ್ತಾರೆ. ಅಂತಹ ಸಮಾಚಾರ ಕೇಳುವವರದು ಕೂಡ ಪಾಪ ಮತ್ತು ಹೇಳುವವರದೂ ಇನ್ನಷ್ಟು ಪಾಪ ಆದ್ದರಿಂದ ಈ ತಪಸ್ಯಾ ವರ್ಷದಲ್ಲಿ ಇಂತಹ ಸೂಕ್ಷ್ಮ ಪಾಪಗಳ ಭಾರವನ್ನು ಸಮಾಪ್ತಿ ಮಾಡಿ. ಆಗಲೇ

ಸಮಾನವಾಗಿ ತಯಾರಾಗಬಲ್ಲಿರಿ. ನಾವು ಯಾವ ತಪ್ಪನ್ನು ಮಾಡಲಿಲ್ಲ ಎಂದು ತಿಳಿಯುತ್ತಿದ್ದೀರಿ ಆದರೆ ಇಂತಹ ಸೂಕ್ಷ್ಮ ತಪ್ಪುಗಳನ್ನು ಬಹಳ ಮಾಡುತ್ತಿದ್ದೀರಿ. ನಾನು ಕೇಳಿದ್ದನ್ನು ಕೇಳಿದ ಹಾಗೆ ಹೇಳಿದ್ದೇನೆ. ನನಗೆ ಎಂತಹ ಭಾವನೆಯೂ ಇಲ್ಲ ಎಂದು ಸೂಕ್ಷ್ಮವಾಗಿ ಹೇಳುತ್ತೀರಿ ಆದರೆ ಫಲಿತಾಂಶವೇನು? ವ್ಯಾಪಿಸುವುದು & ಭಾರಕ್ಕೆ ಅಧಿಕಾರಿಗಳಾಗುವುದು. ಇಂದಿನ ದಿನಗಳಲ್ಲಿ ಇದೊಂದು ಪದ್ಧತಿಯಾಗಿ ಬಿಟ್ಟಿದೆ. ಪರಸ್ಪರ ಮಿಲನವಾದಾಗ, ಭೇಟಿಯಾದಾಗ ಮೊದಲು ಇಂತಹ ಹೊಸ ಹೊಸ ಸಮಾಚಾರಗಳನ್ನು ಹೇಳಿಕೊಳ್ಳುತ್ತಾರೆ. ಅಷ್ಟೇ ಅಲ್ಲದೇ ನಿಮಗೇ ಹೇಳುತ್ತಿದ್ದೇನೆ ಇನ್ನು ಯಾರಿಗೂ ಹೇಳಬೇಡಿರಿ ಎಂದು ಹೇಳುತ್ತಾರೆ ಆದರೆ ತಂದೆಯಂತೂ ಕೇಳಿದ್ದಾರೆ ತಾನೆ. ನಿಮ್ಮ ರಿಜಿಸ್ಟರ್(ಸಂಸ್ಕಾರ) ನಲ್ಲಿ ಮಚ್ಚೆ ಬಿದ್ದಿತು ತಾನೇ? ಆದ್ದರಿಂದ ಈ ವಿಷಯದ ಮೇಲೆ ಗಮನವಿಡಿ. ಬಾಪ್‌ದಾದಾರವರಿಗೆ ತಿಳಿಯುವುದಿಲ್ಲವಲ್ಲ ಎಂದುಕೊಳ್ಳಬೇಡಿ, ದಾದಿಗಳಾದರೆ ಎಲ್ಲೋ ಮೂಲೆಯಲ್ಲಿ ಇದ್ದಾರೆ ಅವರಿಗೇನು ತಿಳಿಯುತ್ತದೆ ಎಂದು ಕೊಳ್ಳಬೇಡಿರಿ. ದಾದಿಯವರಿಗೆ ತಿಳಿಯದೆ ಇರಬಹುದು ಆದರೆ ನಿಮ್ಮ ರಿಜಿಸ್ಟರ್ ನಲ್ಲಿ ಈರೆಕಾರ್ಡ್ ಸ್ವತಹವಾಗಿ ತುಂಬಲ್ಪಡುತ್ತಿದೆ. ಇಂದಿನ ದಿನಗಳಲ್ಲಿ ಕಂಪ್ಯೂಟರ್‌ನಲ್ಲಿ ರೆಕಾರ್ಡ್ ಎಲ್ಲಾ ಇಡಲು ಬರುತ್ತಿರುವಾಗ ನಿಮ್ಮ ರಿಜಿಸ್ಟರ್ ನಲ್ಲಿ ಈ ರೆಕಾರ್ಡ್ ಸ್ವತಹವಾಗಿ ತುಂಬಲಾಗುವುದಿಲ್ಲವೇ? ದಾದೀಯರು ನೋಡುವುದಿಲ್ಲ, ಇತರರೂ ನೋಡುವುದಿಲ್ಲ ಆದರೆ ನಿಮ್ಮ ರಿಜಿಸ್ಟರ್ ನೋಡುತ್ತದೆ ಆದ್ದರಿಂದ ಪರಿವರ್ತನೆಯಾಗಿರಿ ಏಕೆಂದರೆ ಬಾಪ್‌ದಾದಾ ಫಲಿತಾಂಶದಲ್ಲಿ ಏನು ನೋಡಿದರೆಂದರೆ ತಪಸ್ಸು ಶಕ್ತಿಶಾಲಿಯಾಗಿ ಇಲ್ಲದ ಕಾರಣ ಏನು ಎಂದು ಸದಾ ವಿಜಯೀ ಆಗುವುದರಲ್ಲಿ ವಿಘ್ನ ರೂಪ ಯಾವುದು? ಈ ವಿಘ್ನಗಳನ್ನು ಸ್ವಯಂ ಸಮಾಪ್ತಿ ಮಾಡಿರಿ. ಇತರರು ಪರಿವರ್ತನೆಯಾದರೆ ನಾನು ಪರಿವರ್ತನೆ ಆಗುತ್ತೇನೆ. ಇವರನ್ನು ಪರಿವರ್ತನೆ ಮಾಡಿದರೆ ನಾನು ಪರಿವರ್ತನೆ ಆಗುತ್ತೇನೆ ಎಂಬ ಭಾಷೆ ಯಥಾರ್ಥವಾದುದೇ? ದೊಡ್ಡವರಿಗೆ ಮೊದಲು ವಿಷಯವನ್ನು ತಿಳಿಸಲು ಎಲ್ಲರಿಗೂ ಹಕ್ಕಿದೆ ಆದರೆ ಸತ್ಯತೆ ಮತ್ತು ಸಭ್ಯತಾ ಪೂರ್ವಕವಾಗಿ.

ಈಗ ಎಷ್ಟು ಹೋಂವರ್ಕ್ ಲಭಿಸಿದೆ? ಈ ವರ್ಷದಲ್ಲಿ ರಿಜಿಸ್ಟರ್ ನಲ್ಲಿ ಇಂತಹ ಸೂಕ್ಷ್ಮ ಕಲೆಗಳು ಕೂಡ ಇರಬಾರದು. ಆಗ ತಂದೆ ಇವರಿಗೆ ತಂದೆಯ ಮೇಲೆ ಪ್ರೀತಿ ಇದೆ ಎಂದು ಹೇಳುತ್ತಾರೆ. ಇಲ್ಲದಿದ್ದರೆ ತಂದೆ ಮತ್ತು ಸ್ವಯಂ ಅನ್ನು ಸಂತೋಷಪಡಿಸುತ್ತಿದ್ದೀರಿ ಅಷ್ಟೇ. ವ್ಯರ್ಥ ಸಮಾಚಾರ ಪೂರ್ತಿ ಸಮಾಪ್ತಿಯಾಗಬೇಕು. ಈ ಅಭ್ಯಾಸ ಜಾಸ್ತಿಯಾಗುತ್ತಿದೆ. ತಪಸ್ಸಿಗೆ ಇದೇ ವಿಘ್ನವಾಗಿದೆ. ನನ್ನಲ್ಲಿರುವ ಈ ಅಭ್ಯಾಸವನ್ನು ಸಮಾಪ್ತಿ ಮಾಡಿಕೊಳ್ಳಲು ನಾನೇ ಜವಾಬ್ದಾರನು ಎಂದು ಪ್ರತಿಯೊಬ್ಬರೂ ಭಾವಿಸಬೇಕು. ತಿಳಿಯಿತೇ ಇತರರು ಮಾಡಿದ್ದಾರೆ ಆದ್ದರಿಂದ ನಾನು ಕೂಡ ಮಾಡಿದ್ದೇನೆ. ಅವರು ನಾಲ್ಕು ಮಾತುಗಳನ್ನು ಆಡಿದರೆ ನಾನು ಕೂಡ ಒಂದು ಮಾತೇ ಆಡಿದ್ದೇನೆ ಅಷ್ಟೇ. ಎಂಬ ಈ ಭಾಷೆ ಸರಿಯಾದುದೇ? ಈ ಅಭಿರುಚಿಯನ್ನು ಸಮಾಪ್ತಿ ಮಾಡಿಕೊಳ್ಳುವ ಧೈರ್ಯವಿದೆಯೇ? ಬ್ರಾಹ್ಮಣ ಕುಲದಲ್ಲಿ ಈಗ ಇದು ಹೊಸ ಫ್ಯಾಷನ್. ಆದರೆ ಇದು ನಷ್ಟದಾಯಕವಾಗಿರುವ ಫ್ಯಾಷನ್. ಇದರ ಸಮಾಪ್ತಿ ಸಮಾರೋಹ ಮಾಡುವ ಧೈರ್ಯವಿದೆಯೇ? ಪ್ರಯತ್ನಿಸುತ್ತಿದ್ದೇವೆ, ಪ್ರಯತ್ನ ಮಾಡುತ್ತಿದ್ದೇವೆ ಎಂಬುವವರು ಕೈಯನ್ನು ಎತ್ತಿರಿ. ಬಾಪ್‌ದಾದಾ ಸೆಂಟರ್ ಹೆಸರನ್ನು ಪ್ರಕಟಿಸುತ್ತಾರೆ. ಈ ಸೆಂಟರ್ ನಲ್ಲಿ, ಈ ಸ್ಥಾನದಲ್ಲಿ ಇಂತಹ ವಾತಾವರಣವು ಇದೆ ಎಂದು ಹೇಳುತ್ತಾರೆ ಇಷ್ಟವೇನಾ? ಅಥವಾ ಭಯಪಡುತ್ತೀರಾ ಇಂತಹವುಗಳಲ್ಲಿ ನಮ್ಮ ಹೆಸರು ಬರಬಾರದು ಎಂಬ ಭಯ ಒಳ್ಳೆಯದೇ. ಕೈಯನ್ನು ಎತ್ತುತ್ತಿದ್ದೀರಿ ನೋಡಿಕೊಳ್ಳಿರಿ ಧರ್ಮರಾಜಪುರಿಯಲ್ಲಿ ಕೂಡ ಕೈಯನ್ನು ಎತ್ತುತ್ತೀರಿ ಎಲ್ಲರೂ ಕೈ ಎತ್ತುವುದನ್ನು ತಂದೆಯೊಂದಿಗೆ ಧರ್ಮರಾಜ ಕೂಡ ನೋಡಿದ್ದಾರೆ ಆದರೆ ಯಾರಿಗೆ ಲಾಭ. ಎಷ್ಟು ನಿಯಮದಿಂದ ಇರುತ್ತೀರೋ ಅಷ್ಟು ನಿಮಗೇ ಲಾಭ ಯಾರು ನಿಯಮಪೂರ್ವಕವಾಗಿ ನಡೆಯುತ್ತಾರೆಯೋ ಅವರಿಗೆ ಒಳಗೊಳಗೆ ಬಹಳ ಲಾಭವಿರುತ್ತದೆ. ಬಾಹ್ಯವಾಗಿ ಬರುವ ಲಾಭವಿದ್ದರೂ, ಇಲ್ಲದಿದ್ದರೂ ಒಳಗೊಳಗೆ ಹಗುರತೆ ಮತ್ತು ಸಂತೋಷವೆಂಬ ಲಾಭ ಹೆಚ್ಚಾಗಿ ಇರುತ್ತದೆ. ಯಾರಾದರೂ ಒಳ್ಳೆಯವರು ಎಂದು ಹೇಳಿದರೂ, ಹೇಳದಿದ್ದರೂ ಸ್ವಯಂನಲ್ಲಿ ಒಳ್ಳೆಯವರಾಗಿ ತಯಾರಾಗುವ ಶಕ್ತಿ ಬರುತ್ತದೆ. ತಿಳಿಯಿತೇ? ಈ ವರ್ಷ ಈ ಫಲಿತಾಂಶವನ್ನು ಕೇಳಿದ್ದೀರಿ. ಈಗ ಏನು ಮಾಡುವಿರಿ? ಸ್ವಪರಿವರ್ತನೆ ಮಾಡಿಕೊಳ್ಳುವುದು. ಬೇರೆಯವರ ಪರಿವರ್ತನೆಯ ಚಿಂತೆಯನ್ನು ಮಾಡಬೇಡಿ. ಇದನ್ನೇ ಶುಭಚಿಂತನೆಯೆಂದು ಹೇಳಲಾಗುವುದು. ನಂತರ ಹೇಳುತ್ತಾರೆ - ನಾವು ಚಿಂತೆಯನ್ನು ಮಾಡುವುದಿಲ್ಲ. ಶುಭಚಿಂತಕರಾಗಿದ್ದೀವಲ್ಲವೇ!

ಆದರೆ ಸ್ವಯಂನ್ನು ಮರೆತು ಬೇರೆಯವರ ಶುಭಚಿಂತಕರಾಗುವುದಕ್ಕೆ ಶುಭಚಿಂತಕರೆಂದು ಹೇಳಲಾಗುವುದಿಲ್ಲ. ಸರ್ವರ ಜೊತೆಯಲ್ಲಿ ಮೊದಲು ಸ್ವ ಇರಬೇಕು. ಸ್ವ ಇಲ್ಲದೇ ಸರ್ವರ ಶುಭಚಿಂತಕರಾಗುವುದಕ್ಕೆ ಹೋದರೆ ಬಾಣ ನಾಟುವುದಿಲ್ಲ. ಸಫಲತೆಯು ಸಿಗುವುದಿಲ್ಲ. ಮೊದಲು ಸ್ವ ಮತ್ತು ಸ್ವನ ಜೊತೆಯಲ್ಲಿ ಸರ್ವ ಇದೇ ಮಕ್ಕಳೊಂದಿಗೆ ಬಾಪ್‌ದಾದಾರವರ ಹೃದಯದ ಪ್ರೀತಿಯಾಗಿದೆ. ಪ್ರೀತಿಯ ಲಕ್ಷಣವಾಗಿದೆ - ಪ್ರೀತಿ ಮಾಡುವವರ ಯಾವುದೇ ಕೊರತೆಗಳನ್ನು ನೋಡುವುದಿಲ್ಲ. ಯಾವುದೇ ಕೊರತೆಯನ್ನು ಕೇಳಲಾಗುವುದಿಲ್ಲ. ಅವರನ್ನೂ ಸಹ ಸಂಪನ್ನರನ್ನಾಗಿ ಮಾಡುತ್ತಾರೆ. ಇದಾಗಿದೆ ಹೃದಯದ ಸತ್ಯ ಪ್ರೀತಿ. ಬಾಪ್‌ದಾದಾರವರು ದಿಲ್‌ವಾಲಾ(ಹೃದಯದವರಾಗಿದ್ದಾರೆ) ಆಗಿದ್ದಕ್ಕೆ ಹೃದಯದ ಪ್ರೀತಿಯಿದೆ. ಪ್ರತಿಯೊಂದು ಮಗುವನ್ನು ಸಮಾನ ಮತ್ತು ಶ್ರೇಷ್ಠರನ್ನಾಗಿ ನೋಡಲು ಬಯಸುತ್ತಾರೆ. ಪ್ರತಿಯೊಂದು ಮಗುವನ್ನು ಸಫಲತಾಮೂರ್ತಿಯನ್ನಾಗಿ ನೋಡಲು ಬಯಸುತ್ತಾರೆ. ಪರಿಶ್ರಮ ಮೂರ್ತಿಯಲ್ಲ, ಸಫಲತಾಮೂರ್ತಿ.

**ನಾಲ್ಕಾರು ಕಡೆಯ ಸದಾ ನಿಶ್ಚಯಬುದ್ಧಿ ಶ್ರೇಷ್ಠ ಆತ್ಮರು, ಸದಾ ನಿಶ್ಚಯ ಮತ್ತು ವಿಜಯವನ್ನು ಸಮಾನತೆಯಲ್ಲಿ ತರುವವರು, ತೀವ್ರ ಪುರುಷಾರ್ಥಿ ಆತ್ಮರು, ಸದಾ ಸ್ವಮಾನದಲ್ಲಿರುತ್ತಾ ಸ್ವ ಪರಿವರ್ತನೆ ಮತ್ತು ಸರ್ವರ ಪರಿವರ್ತನೆಯ ಯಥಾರ್ಥ ಭಾವನೆಯನ್ನು ಇಟ್ಟುಕೊಳ್ಳುವಂತಹ ಆತ್ಮರು, ಸದಾ ತಂದೆಯ ಸಮಾನರಾಗಿ ಪ್ರೀತಿಯ ಪುರಾವೆ ಕೊಡುವಂತಹ ಆತ್ಮರಿಗೆ, ಸದಾ ಯಥಾರ್ಥ ಆತ್ಮಿಕ ವಾರ್ತಾಲಾಪ ಮಾಡಿ ವ್ಯರ್ಥ ಮಾತುಗಳನ್ನು ಸಮಾಪ್ತಿ ಮಾಡುವಂತಹ ಆತ್ಮರಿಗೆ ದಿಲ್ ವಾಲಾ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 15-04-1992.

***ಬ್ರಾಹ್ಮಣರ ಎರಡು ಚಿಹ್ನೆಗಳು- ನಿಶ್ಚಯ ಹಾಗೂ ವಿಜಯ.***

ಬ್ರಾಹ್ಮಣ ಜೀವನದ ತಳಹದಿಯೇ ನಿಶ್ಚಯವಾಗಿದೆ. ಮತ್ತು ನಿಶ್ಚಯದ ಪ್ರಮಾಣ ವಿಜಯವಾಗಿದೆ. ಆ ನಿಶ್ಚಯ ವಿಶೇಷವಾಗಿ ನಾಲ್ಕು ವಿಷಯಗಳಲ್ಲಿ ಸಂಪೂರ್ಣವಾಗಿ ಇರಬೇಕು. ಒಂದನೆಯದಾಗಿ-ತಂದೆಯ ಮೇಲೆ ಸಂಪೂರ್ಣ ನಿಶ್ಚಯ ಅವರು ಹೇಗಿದ್ದಾರೆಯೋ, ಯಾರಾಗಿದ್ದಾರೆಯೋ, ಯಾವ ಶ್ರೀಮತವನ್ನು ಹೇಗೆ ಕೊಟ್ಟಿದ್ದಾರೆಯೋ ಅದರಂತೆ ವಿಧಿಪೂರ್ವಕವಾಗಿ ಯಥಾರ್ಥವಾಗಿ ಅರಿತುಕೊಳ್ಳುವುದು ಅಂಗೀಕರಿಸುವುದು ಮತ್ತು ಅದರಂತೆ ನಡೆಯುವುದು.

ಎರಡನೇ ವಿಷಯ-ತಮ್ಮ ಶ್ರೇಷ್ಠ ಸ್ವಮಾನ ಸಂಪನ್ನ, ಶ್ರೇಷ್ಠ ಭಾಗ್ಯಶಾಲಿ ಆತ್ಮನ ಸ್ವರೂಪವನ್ನು ಅರಿತುಕೊಳ್ಳುವುದು, ಅಂಗೀಕರಿಸುವುದು ಮತ್ತು ಅದರಂತೆ ನಡೆಯುವುದು.

ಮೂರನೇ ವಿಷಯ- ನಿಮ್ಮ ಶ್ರೇಷ್ಠ ಬ್ರಾಹ್ಮಣ ಪರಿವಾರವನ್ನು ಯಥಾರ್ಥ ವಿಧಿಯಿಂದ ಹೇಗಿದ್ದಾರೆಯೋ ಹಾಗೆ ತಿಳಿದು ಒಪ್ಪಿ ಅದರಂತೆ ನಡೆಯುವುದು.

ನಾಲ್ಕನೇ ವಿಷಯ- ಇಡೀ ಕಲ್ಪದಲ್ಲಿ ಈ ಶ್ರೇಷ್ಠ ಪುರುಷೋತ್ತಮ ಯುಗ ಅಥವಾ ಸಮಯವನ್ನು ಅದೇ ಮಹಿತ್ವಿಕೆಯಿಂದ ತಿಳಿದುಕೊಳ್ಳುವುದು, ಅದನ್ನು ಒಪ್ಪಿ ನಡೆಯುವುದು. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನಿಶ್ಚಯ ಬುದ್ಧಿ ವಿಜಯೀ ಸ್ವರೂಪ.

2. ನನಗೆ ಪರಮಾತ್ಮ, ಸ್ವಯಂ, ಬ್ರಾಹ್ಮಣ ಪರಿವಾರ, ಡ್ರಾಮಾ ಈ ನಾಲ್ಕರ ಮೇಲೆ ಸ್ಥಿರವಾದ ನಿಶ್ಚಯವಿರುವ ಸಂಪೂರ್ಣ ಯಧಾರ್ಥ ನಿಶ್ಚಯ ಬುದ್ಧಿ ಸ್ವರೂಪ.

3. ನಾನು ಹೃದಯದಿಂದ ಮುಗ್ಧವಾಗಿ ಇರುತ್ತಾ ತ್ರಿಕಾಲ ದರ್ಶಿಯಾಗಿ ವಿಷಯಗಳನ್ನು ಕೇಳಿ ಮತ್ತು ಮಾತನಾಡಿ ಪ್ರತಿಯೊಂದು ಕರ್ಮದ ಪರಿಣಾಮವನ್ನು ಜ್ಞಾನ ಸಾಗರ ನಾಗಿ ತಿಳಿದುಕೊಂಡು ಆಚರಿಸಿದ್ದೇನೆ.

4. ನಾನು ಪ್ರಸನ್ನ ಚಿತ್ತ ಸ್ವರೂಪ.

5. ನಾನು ನಾಲ್ಕು ವಿಷಯಗಳಲ್ಲಿ ಆತ್ಮ, ಪರಮಾತ್ಮ, ಬ್ರಾಹ್ಮಣ ಪರಿವಾರ, ಡ್ರಾಮಾದ ನಿಶ್ಚಯದ ಪರ್ಸೆಂಟೇಜ್ ಅನ್ನು ಸಮಾನವಾಗಿ ಉಳಿಸಿಕೊಂಡಿದ್ದೇನೆ.

6. ನಾನು ಬ್ರಾಹ್ಮಣ ಪರಿವಾರದಿಂದ ಸಂತುಷ್ಟವಾಗಿರುತ್ತಾ, ಸಂತುಷ್ಟಪಡಿಸುತ್ತಾ, ಶ್ರೇಷ್ಠ ಸಂಬಂಧದಲ್ಲಿ ಬಂದು ರಾಜ್ಯಧಾನಿಯಲ್ಲಿ ಬಂದಿದ್ದೇನೆ.

7. ನಾನು ತಂದೆಯ ಸಮಾನವಾಗಿ ಇರುತ್ತಾ ಪ್ರೀತಿಯ ಪ್ರಮಾಣವನ್ನು ಕೊಟ್ಟಿದ್ದೇನೆ.

8. ನಾನು ಸಮಯಕ್ಕಿಂತ ಮೊದಲೇ ಪರಿವರ್ತನೆಯಾಗಿ ಪುರುಷಾರ್ಥದ ಅಂಕಗಳನ್ನು ಜಮಾ ಮಾಡಿಕೊಂಡಿದ್ದೇನೆ.

9. ನಾನು ನಾಲ್ಕು ಕಡೆಯ ಬುನಾದಿಯನ್ನು ಗಟ್ಟಿಯಾಗಿ ಹಾಕಿಕೊಂಡು ಮಾಲೆಯಲ್ಲಿರುವ ಮಣಿಯಾಗಿ ಪೂಜ್ಯ ಆತ್ಮ ಮತ್ತು ರಾಜ್ಯಾಧಿಕಾರಿಯಾಗಿದ್ದೇನೆ.

10. ನಾನು ಹೋಂವರ್ಕ್ ನಲ್ಲಿ ಮತ್ತು ಪ್ರತ್ಯಕ್ಷ ಅಭ್ಯಾಸದಲ್ಲಿ ನಂಬರ್ ವನ್ ಆಗಿರುವ ವಿದ್ಯಾರ್ಥಿ.

11. ನಾನು ಸ್ವಯಂ ಅನ್ನು ನೋಡಿಕೊಳ್ಳುವ ಸ್ವದರ್ಶನ ಚಕ್ರಧಾರಿ.

12. ನಾನು ಸದಾ ನಿರ್ಮಾಣವಾಗಿ, ಸಭ್ಯತಾ ಪೂರ್ವಕವಾಗಿ, ಸತ್ಯತೆಯ ಪ್ರಮಾಣವನ್ನು ತೋರಿಸಿ ಸಫಲತೆಯನ್ನು ಪಡೆದಿದ್ದೇನೆ.

13. ನಾನು ಸೂಕ್ಷ್ಮವಾದ ಪಾಪದ ಭಾರವನ್ನು ಸಮಾಪ್ತಿ ಮಾಡಿಕೊಂಡು ಹಾರುವ ಕಲೆಯ ಅನುಭವವನ್ನು ಮಾಡಿ ಸಮಾನವಾಗಿ ತಯಾರಾಗಿದ್ದೇನೆ.

14. ನಾನು ಸ್ವಯಂ ಪರಿವರ್ತನೆಯಾಗಿ ಇತರರನ್ನು ಪರಿವರ್ತನೆ ಮಾಡುವ ಶುಭ ಚಿಂತಕನು.